# ಅಮರ ಗಾಯಕಿ ಭಾನುಮತಿ



■ ವಿ. ಪ್ರಾಣೇಶ್ ರಾವ್

1957 'ವರುಡ ಕಾವಾಲಿ' ಅಂತ ಒಂದು ತೆಲುಗು ಸಿನಿಮಾ. ಅದರಲ್ಲಿ ಒಂದು ಕನ್ನಡ ಹಾಡು, 'ಕೃಷ್ಣಾ ನೀ ಬೇಗನೆ ಬಾರೊ' ಎಂಬ ಸುಪ್ರಸಿದ್ಧ ಕೀರ್ತನೆ. ಜಿ. ರಾಮನಾಥನ್ ಸಂಗೀತ ನಿರ್ದೇಶಕರು. ಇದರಲ್ಲಿ ಹಿನ್ನೆಲೆ ಗಾಯನ, ಗೀತಾಭಿನಯದ ಜತೆಗೆ ಚಿತ್ರದ ನಿರ್ಮಾಣವೂ ಸಹ ದಕ್ಷಿಣದ ಖ್ಯಾತ ಅಭಿನೇತ್ರಿ ಪಿ.ಭಾನುಮತಿ ಅವರಿಂದ! 'ಭಾನುಮತಿ' ಎಂದೊಡನೆ ತೆಲುಗು ತಮಿಳಿನ ಖ್ಯಾತ ಗಾಯಕಿ ಹಾಗೂ ಸುಪ್ರಸಿದ್ಧ ನಟಿ ಎಂದೇ ಜನರು ತಿಳಿದಿದ್ದ ಆ ಕಾಲದಲ್ಲಿ ಕನ್ನಡದಲ್ಲೂ ಒಂದೇ ಒಂದು ಚಿತ್ರದ ಮೂಲಕ ನಟನೆ ಹಾಗೂ ಗಾಯನದಿಂದ ಅಚ್ಚಳಿಯದ ಛಾಪನ್ನು ಮೂಡಿಸಿದ ಕಲಾವಿದೆಯಾಗಿದ್ದರು ಎಂಬುದು ಇಂದಿಗೂ ಅನೇಕರಿಗೆ ಗೊತ್ತಿಲ್ಲದ ಸಮಾಚಾರ!

ಆಗಿನ ಕಾಲದಲ್ಲಿ ಆಕಾಶವಾಣಿ ಬೆಂಗಳೂರು, ಸಿಲೋನ್ ಸ್ಟೇಷನ್ನೂ ಭಾನುಮತಿಯ ಹಾಡುಗಳನ್ನು ಪ್ರಸಾರ ಮಾಡುತ್ತಿದ್ದವು. ಟೆಂಟ್ ಸಿನಿಮಾಗಳಲ್ಲಿ ಸಿನಿಮಾ ಪ್ರಾರಂಭವಾಗುವ ಮೊದಲು, ರಂಗಭೂಮಿಯಲ್ಲಿ ನಾಟಕದ ತೆರೆ ಏಳುವ ಮೊದಲು, ಸಂತೆ ಮಾರುಕಟ್ಟೆಯಲ್ಲಿ ಹಲ್ಲು ಪುಡಿ, ನಾರು ಬೇರಿನ ಔಷಧಿ ಮಾರುವವರಲ್ಲಿ ಅವರು ಹಾಕುತ್ತಿದ್ದ ಗ್ರಾಮಫೋನ್ ಹಾಡುಗಳಲ್ಲಿ ಭಾನುಮತಿ ಹಾಡಿದ ಹಾಡುಗಳು ಇರುತ್ತಿದ್ದವು. ಹೀಗೆ ಈಕೆ ಕನ್ನಡ ಜನಕ್ಕೆ ಪರಿಚಯವಾಗುತ್ತಿದ್ದರು. ಕನ್ನಡದಲ್ಲಿ 1957ರಲ್ಲಿ ತೆರೆಗೆ ಬಂದ ಕೆಂಪರಾಜ್ ಪ್ರೊಡಕ್ಷನ್ಸ್‌ರವರ 'ನಳ ದಮಯಂತಿ' ಒಂದೇ ಭಾನುಮತಿ ಅಭಿನಯಿಸಿದ ಚಿತ್ರ! ಆದರೆ ಎನ್.ಎಸ್.ಶ್ರೀಧರಮೂರ್ತಿ ಅವರು ಹೇಳುವಂತೆ ಈಕೆ ಅಭಿನಯಿಸಿದ ಮೊದಲ ಕನ್ನಡ ಚಿತ್ರ 1943ರಲ್ಲಿ ಬಂದ 'ರಾಧಾ ರಮಣ!' ಗೆಳತಿ ಎಂ.ವಿ. ರಾಜಮ್ಮ ನಿರ್ಮಿಸಿದ್ದ ಈ ಚಿತ್ರದಲ್ಲಿ ಚಿಕ್ಕ ಪಾತ್ರ. ಮುಂದೆ 'ಅಣ್ಣ ತಂಗಿ'ಯಲ್ಲೂ ರಾಜ್‌ಕುಮಾರ್ ಜೋಡಿಯಾಗಿ ಅಭಿನಯಿಸಿಬೇಕಾಗಿತ್ತಂತೆ. ಆದರೆ ಕಾರಣಾಂತರಗಳಿಂದ ಆ ಪಾತ್ರ ಕನ್ನಡದ ಬಿ.ಸರೋಜಾದೇವಿಯವರ ಪಾಲಿಗೆ ಹೋಯಿತಂತೆ.

ಸಿಲೋನ್ ಸ್ಟೇಷನ್‌ನಲ್ಲಿ 'ಕನ್ನಡ ಪಾಡಲ್' ಕಾರ್ಯಕ್ರಮದಲ್ಲಿ ಭಾನುಮತಿ ಹಾಡಿರುವ 'ನಳ ದಮಯಂತಿ' ಚಿತ್ರದ ಕೆಲವು ಹಾಡುಗಳು ಕೇಳಿ ಬರುತ್ತಿದ್ದವು. 'ಅರಸಂಚೆ ನೀಡಿದ ಅಮರ ಸಂದೇಶವದು! ಅನುರಾಗದ ಅಲೆಗಳನು ಏಳಿಸುತಾ ನಿಂತಿಹುದು' ಮಾನಧಮಾನ ಸಹಿಸೆನೂ ಜೀಯಾ! ಮೊರೆ ಕೇಳಿ ಸಲಹೊ ಮಹನೀಯ', 'ಬೆಂಬಿಡದೆ ನಡೆದಂತದವಳ ಬಿಸಿ ಕಂಬನಿಗೆ ಗುರಿಯಾದಳಾ' 'ಕಂಡೇ ಜೀವನ ಸಾರಥಿಯಾ! ಮುದಗೊಂಡೆ ಬೆಳಗಿ ನಯನಾರತಿಯಾ ಓ‌ಓ' ಹಾಗೂ ಪತಿಪಾದ ಕಮಲಗಳ ಕಾರುಣ್ಯ ಪಡೆದಿರುವ ಸುದತಿಯಾವಳೊ ಕಾಣೆ! ವೈಭವಕೆ ಮರುಳಾಗಿ ಒಲಿದವಳು ನಾನಲ್ಲ! ಅಭೋಗ ಲಾಲಸೆಗೆ ಗುರಿಯಾದ ಸತಿಯಲ್ಲ!! ಇವೇ ಮೊದಲಾದ ಹಾಡುಗಳು ಒಂದು ತೆರನ ಗುಂಗನ್ನು ಹಿಡಿಸಿ ಬಿಡುತ್ತಿದ್ದವು. ಎಚ್‌ಎಂವಿ ಈ ಹಾಡುಗಳನ್ನು ಧ್ವನಿಮುದ್ರಿಸಿದೆ. ಆದರೆ ಧ್ವನಿ ಮುದ್ರಿಕೆಗಳು 78 ಆರ್‌ಪಿಎಂನಲ್ಲಿದ್ದು ಅವು ಈಗ ಲಭ್ಯವಿಲ್ಲ. ಹಳೆಯ ಹಾಡುಗಳನ್ನು ಸಂಗ್ರಹಿಸುವವರಿಗೆ ಇದು ದೊಡ್ಡ ತೊಡಕಾಗಿ ಪರಿಣಮಿಸಿದೆ.



ಅದಕ್ಕೆ ಕೀಟ್ಸ್ ಹೇಳುತ್ತಾನೆ– 'ಹರ್ಡ್ ಮೆಲೊಡೀಸ್ ಆರ್ ಸ್ವೀಟ್, ಬಟ್ ದೋಸ್ ಅನ್ ಹರ್ಡ್ ಆರ್ ಸ್ವೀಟರ್' ಅಂತ.

ಮೇಲಿನ ಗೀತೆಗಳಲ್ಲದೆ ಇನ್ನೂ ಎರಡು 'ಸೋಲೊ' ಹಾಗೂ ಮತ್ತೊಂದು ಯುಗಳ ಗೀತೆ ಈ ಚಿತ್ರದಲ್ಲಿ ಇದ್ದವು ಅಂತ ಎಸ್.ಜಯಸಿಂಹ ಅವರ ದಾಖಲೆಯಿಂದ ತಿಳಿದು ಬರುತ್ತದೆ. 'ಸಖಿಯೇ..ನಿನ್ನಯ ಹೃದಯ ರತುನವ', 'ಹೇ ಸರ್ವಮಂಗಳಯೇ...ಮಾಂಗಲ್ಯ ಮೂರುತಿಯೇ' ಹಾಗೂ ಘಂಟಸಾಲ ಅವರೊಂದಿಗೆ ಹಾಡಿರುವ 'ಪ್ರೇಮಮಯ...ಈ ಜೀವನವು ಪಾವನ...' ಈ ಎಂಟೂ ಗೀತೆಗಳ ಧ್ವನಿಸುರುಳಿ ಹಾಗೂ ಧ್ವನಿಚಕ್ರವನ್ನು ಎಚ್‌ಎಂವಿ ಈಗ ಮಾರುಕಟ್ಟೆಗೆ ತರುವುದು ಅತ್ಯಂತ ಸಕಾಲವಾಗಿದೆ.

'ನಳ ದಮಯಂತಿ' ಚಿತ್ರಕ್ಕೆ ಕತೆ ಚಿತ್ರಕತೆ ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದವರು ಹುಣಸೂರು ಕೃಷ್ಣಮೂರ್ತಿ ಸಂಗೀತ ನಿರ್ದೇಶಕರು ವಿ.ಗೋಪಾಲಂ. ಈ ಚಿತ್ರದಲ್ಲಿ ಒಟ್ಟು ಇಪ್ಪತ್ತಾರು ಹಾಡುಗಳಿದ್ದುವಂತೆ! 1957ರಲ್ಲಿ ಬಿಡುಗಡೆಯಾದ ಚಿತ್ರಗಳಲ್ಲಿ ಇದು ನಾಲ್ಕನೆಯ ಚಿತ್ರವಾಗಿತ್ತು.

ಕೆಂಪರಾಜ್–ಆಗಿನ ಕಾಲದ ಸ್ಫುರದ್ರೂಪಿ ನಟ ನಿರ್ದೇಶಕ ಮಾತ್ರವಲ್ಲದೆ ನಳನ ಪಾತ್ರಕ್ಕೆ ಹೇಳಿ ಮಾಡಿಸಿಂತಿದ್ದ ಪ್ರತಿಭೆ ದಮಯಂತಿಯಾಗಿ ಭಾನುಮತಿ ಇವರೊಂದಿಗೆ ನರಸಿಂಹರಾಜು, ವಾಸುದೇವ ಗಿರಿಮಾಜಿ ಸಹ ಪಾತ್ರ ವಹಿಸಿದ್ದರು.

ಭಾನುಮತಿ ಅವರದ್ದು ಬಹುಮುಖ ಪ್ರತಿಭೆ. ದಕ್ಷಿಣದ ಖ್ಯಾತ ಹಿನ್ನೆಲೆ ಗಾಯಕಿ, ನಟಿ, ನಿರ್ದೇಶಕಿ, ಸಂಗೀತ ನಿರ್ದೇಶಕಿ, ಸಂಕಲನಕಾರ್ತಿ, ಚಿತ್ರಕಥಾ ಲೇಖಕಿ, ನೃತ್ಯ ಪ್ರವೀಣೆ, ಭರಣಿ ಸ್ಟುಡಿಯೊ ಒಡತಿ, ತೆಲುಗಿನ ಖ್ಯಾತ ಬರಹಗಾರ್ತಿ, ಸಾಹಿತ್ಯ ಅಕಾಡೆಮಿ, ಪದ್ಮಶ್ರೀ, ಪದ್ಮಭೂಷಣ ಪುರಸ್ಕೃತೆ, ಗೌರವ ಡಾಕ್ಟರೇಟ್ ಪಡೆದ ಮೇಧಾವಿ.. ಹೀಗೆ ಏನೇನೊ ಆಗಿದ್ದ ಭಾನುಮತಿ ತಮಿಳು, ತೆಲುಗು, ಹಿಂದಿ ಸೇರಿದಂತೆ ನೂರಕ್ಕೂ ಮಿಕ್ಕಿದ ಚಿತ್ರಗಳಲ್ಲಿ ಅಭಿನಯಿಸಿದ್ದರು. ಇಂಥ ಚಟುವಟಿಕೆಯ ಚಿಟ್ಟೆ ಕನ್ನಡವನ್ನು ಮರೆಯದೆ 1980–81ರಲ್ಲಿ 'ಸಂಗೀತಾ' ಸಂಸ್ಥೆಯ ಮೂಲಕ ಕನ್ನಡದಲ್ಲಿ ದೇವರನಾಮಗಳನ್ನು ಹಾಡಿ ಧ್ವನಿಸುರಳಿ ಹಾಗೂ ಧ್ವನಿಮುದ್ರಿಕೆಗಳನ್ನು ಹೊರತಂದರು.

ಶಾಸ್ತ್ರೀಯ ಸಂಗೀತದಲ್ಲೂ ಪರಿಣತಿ ಹೊಂದಿದ್ದ ಡಾ.ಪಿ.ಭಾನುಮತಿ ರಾಮಕೃಷ್ಣ ಪುರಂದರದಾಸರ ಎಂಟು ಜನಪ್ರಿಯ ಹಾಡುಗಳನ್ನು ಶಂಕರಾಭರಣ, ಕಲ್ಯಾಣಿ, ಕಾನಡ, ಕಾಂಬೋಧಿ, ಬೇಹಾಗ್ ಹಾಗೂ ಆನಂದಭೈರವಿ ರಾಗಗಳಲ್ಲಿ ವೈವಿಧ್ಯಮಯವಾಗಿ ಹಾಡಿದ್ದಾರೆ. ಅವರ ಈ ಕೊಡುಗೆಯಿಂದ ಆ ಅಮರ ಗಾಯಕಿಯ ಕನ್ನಡದ ಇನಿ ದನಿ ಸ್ಥಿರವಾಗಿ ಉಳಿದಿದೆ.

2005ರ ಡಿ.24ರಂದು ಭಾನುಮತಿ ಇನ್ನಿಲ್ಲವಾದರು. ಅವರ ಸಂಗೀತದ ಕಲೆಯ ಅಮೂಲ್ಯ ಆಸ್ತಿ ಮಾತ್ರ ಚಿರನೂತನ..!

(ಓದುಗರಲ್ಲಿ ಭಾನುಮತಿಯವರ ಹಾಡುಗಳು ಲಭ್ಯವಿದ್ದರೆ ಈ ನಂಬರಿಗೆ ತಿಳಿಸಿ. 9481304593)